**Publication: Vartha Prabha**

Date : 07-6-2022

# ಸಿಎಂಆರ್‌ಐಟಿ ವತಿಯಿಂದ ವಿಶ್ವ ಪರಿಸರ ದಿನ ಆಚರಣೆ









ವಿಶ್ವಪರಿಸರದ ದಿನದ ಅಂಗವಾಗಿ ನಗರದ ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯಜೂನ್ 5 – 2022ರಂದು ರಾಷ್ಟ್ರೀಯ ಸೇವಾ ಯೋಜನೆ, ಯೂತ್‌ರೆಡ್‌ಕ್ರಾಸ್ ಮತ್ತುರೋಟರ್ಯಾಕ್ಟ್‌ಕ್ಲಬ್ ಸಹಯೋಗದಲ್ಲಿ ವಿಶ್ವ ಪರಿಸರದಿನವನ್ನುಆಚರಿಸುವ ಮೂಲಕ ಪರಿಸರ ಉಳಿಸಿ ಜಾಗೃತಿಅಭಿಯಾನ ಮಾಡಿತು. "ಮಣ್ಣನ್ನು ಉಳಿಸಿ–ಪರಿಸರ ಬೆಳಸಿ" ಎಂಬ ಸಂದೇಶದೊಂದಿಗೆ ವಿದ್ಯಾರ್ಥಿಗಳು, ಅಧ್ಯಾಪಕರುಗಳು ಜೊತೆಯಾಗಿಕಾಲ್ನಡಿಗೆಜಾಥ(ವಾಕಾಥಾನ್ ) ಮೂಲಕ ಸಾರ್ವಜನಿಕರಲ್ಲಿ ಪರಿಸರ ಸಂರಕ್ಷಣೆಯಅರಿವು ಮೂಡಿಸಿದರು. ಪರಿಸರಜಾಥಾದಲ್ಲಿ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರುಗಳು ಪರಿಸರ ಸ್ನೇಹಿ ಜೀವನ ಸಂದೇಶಗಳನ್ನು ಸಾರುವ ಫಲಕಗಳು ಹಾಗೂ ಬ್ಯಾನರ್‌ಗಳನ್ನು ಪ್ರದರ್ಶಿಸುವ ಮೂಲಕ ಸಾರ್ವಜನಿಕರಲ್ಲಿ ಪರಿಸರಜಾಗೃತಿ ಮೂಡಿಸಿದರು. ಇನ್ನು ಈ ಪರಿಸರಜಾಥದಲ್ಲಿ ಭಾಗವಹಿಸಿ ಮಾತನಾಡಿದ ಸಿಎಂಆರ್‌ಐಟಿ ಕಾಲೇಜಿನ ಪ್ರಾಂಶುಪಾಲರಾದಡಾ.ಸಂಜಯ್ ಜೈನ್‌ಆಧುನಿಕತೆ ಮತ್ತುಅಭಿವೃದ್ಧಿ ಹೆಸರಿನಲ್ಲಿಇಂದು ನಾವು ಪರಿಸರವನ್ನು ನಾಶ ಮಾಡುತ್ತಿದ್ದೇವೆ. ಇದರ ಪರಿಣಾಮವಾಗಿ ಮಳೆಯ ಅಭಾವ ಹಾಗೂ ಅತಿಯಾದತಾಪಮಾನವನ್ನುಎದ ುರಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಪರಿಸರವನ್ನು ಉಳಿಸಿ–ಬೆಳೆಸುವ ನಿಟ್ಟಿನಲ್ಲಿಎಲ್ಲರೂಕೈಜೋಡಿಸಬೇಕುಎಂದು ಸಲಹೆ ನೀಡಿದರು.